

ಅಗರಬತ್ತಿಗಳನ್ನು ತಯಾರಿಸುವ ಯೋಜನೆ.

ಉದ್ಯಮವನ್ನು ಬೆಳೆಸುವ ನಿಟ್ಟಿನಲ್ಲಿ ಕೈಗೊಂಡ ಪ್ರಯಾಣದಲ್ಲಿ ನಿಖಿಲ್ ಕೆಲವೊಮ್ಮೆ ಹಳ್ಳಿಗಳಲ್ಲಿನ ದೇವಾಲಯಗಳಲ್ಲಿ ತಂಗಬೇಕಾಯಿತು. ಆ ವಾಸ್ತವ್ಯದ ಸಮಯದಲ್ಲಿ ಅವರು ಹೂವಿನತ್ಯಾಜ್ಯವನ್ನು ಹತ್ತಿರದ ಜಲಮೂಲಗಳಲ್ಲಿ ಹಾಕುವುದನ್ನು ಗಮನಿಸಿದರು. ಕೆಲವರು ಪ್ಲಾಸ್ಟಿಕ್ ಚೀಲಗಳಲ್ಲಿ ಬಾಡಿದ ಹೂಗಳನ್ನು ತುಂಬಿ ಸಾರ್ವಜನಿಕ ಸ್ಥಳದಲ್ಲಿ ಎಸೆಯುವುದನ್ನೂ ಗಮನಿಸಿದರು. ಹೀಗೆ ಹೂಗಳನ್ನು ನೀರಿಗೆ ಸೇರಿಸುವುದರಿಂದ ಉಂಟಾಗುವ ಪರಿಸರ ಮಾಲಿನ್ಯ ಅವರನ್ನು ಗಾಬರಿಗೊಳ್ಳುವಂತೆ ಮಾಡಿತು; ಹೂಗಳ ಮರುಬಳಕೆ ಮಾಡುವತ್ತ ಯೋಚಿಸುವಂತೆ ಮಾಡಿತು.

ದೇವಾಲಯಗಳು ಮತ್ತು ಮಸೀದಿಗಳಿಂದ ತ್ಯಾಜ್ಯ ಹೂವುಗಳನ್ನು ಪಡೆಯುವುದು ಅವರಿಗೆ ಸುಲಭವಾಗಿರಲಿಲ್ಲ. ಅನೇಕ ಪುರೋಹಿತರು ನಿಖಿಲ್‌ರ ವಿಚಾರವನ್ನು ಒಪ್ಪಲಿಲ್ಲ. ಪುನರ್ಜನ್ಮದ ಧಾರ್ಮಿಕ ನಂಬಿಕೆಯಂತೆ, ಹೂವುಗಳನ್ನು ಅಗರಬತ್ತಿ ಅಥವಾ ಧೂಪದ ಕಡ್ಡಿಗಳಾಗಿ ಮರುಜನ್ಮ ನೀಡುವುದಾಗಿ ನಿಖಿಲ್ ವಾದಿಸಿದರು. ಆರಂಭಿಕ ಅಡಚಣೆಗಳ ನಂತರ ಹೆಚ್ಚು ಹೆಚ್ಚು ದೇವಾಲಯಗಳು ನಿಖಿಲ್‌ರ ಯೋಜನೆಗೆ ಆಸಕ್ತಿ ತೋರಿಸಲು ಪ್ರಾರಂಭಿಸಿದವು. ಉದ್ಯೋಗದ ಅಗತ್ಯವಿರುವ ಮಹಿಳೆಯರಿಗೆ ನಿಖಿಲ್‌ರ ಯೋಜನೆ ಉದ್ಯೋಗ ಅವಕಾಶಗಳನ್ನು ಒದಗಿಸಿತು.

ಕಾನ್ಪುರದಲ್ಲಿನ ತಮ್ಮ ಪ್ರಯತ್ನದಲ್ಲಿ ಯಶಸ್ವಿಯಾದ ನಂತರ, ಗಂಪಾ ಸಹೋದರರು ತಮ್ಮ ಯೋಜನೆಯನ್ನು ಮುಂಬೈಗೆ ತರಲು ನಿರ್ಧರಿಸಿದರು. ಧಾರಾವಿ, ಗೋವಂಡಿ ಮತ್ತು ಮನ್‌ಖುರ್ದ್‌ನ ಕೊಳೆಗೇರಿ ಮಹಿಳೆಯರಿಗೆ ಉದ್ಯೋಗ ನೀಡಿದರು. ತಾವು ಅನುಮತಿ ಪಡೆದ ದೇವಾಲಯಗಳಲ್ಲಿ, ಹೂವುಗಳನ್ನು ಸಂಗ್ರಹಿಸುವ ವಿಶೇಷ ಡಸ್ಟ್‌ಬಿನ್‌ಗಳನ್ನು ಇರಿಸಿದರು.

'ಗ್ರೀನ್ ವೇವ್' ತಂಡದೊಂದಿಗೆ ಕೆಲಸ ಮಾಡುವ ಮಹಿಳೆಯರು ಎರಡು ದಿನಗಳಿಗೊಮ್ಮೆ ಹೂವುಗಳನ್ನು ಸಂಗ್ರಹಿಸುತ್ತಾರೆ. ನಂತರ ಹೂವುಗಳನ್ನು ಬೇರ್ಪಡಿಸಿ ಎಸಳುಗಳನ್ನು ಒಣಗಿಸಿ, ಆ ಎಸಳುಗಳನ್ನು ಪುಡಿ ಮಾಡಿ ಬೈಂಡಿಂಗ್ ಪೌಡರ್ ತಯಾರಿಸಲಾಗುತ್ತದೆ. ನಂತರ ಅಂತಿಮ ಉತ್ಪನ್ನದ ತಯಾರಿಕೆ.. ಚೊಕ್ಕದಾಗಿ ಪ್ಯಾಕಿಂಗ್ ಮಾಡಿದ ಪರಿಮಳಭರಿತ ವಿಶೇಷ ಅಗರಬತ್ತಿಗಳಿಗೆ ಉತ್ತಮ ಮಾರುಕಟ್ಟೆಯೂ ದೊರೆಯುತ್ತಿದೆ.

ಇಂಜಿನಿಯರಿಂಗ್ ಓದಿರುವ ಸಹೋದರರು ದೇಸಿ ಉತ್ಪನ್ನಗಳ ಆನ್‌ಲೈನ್ ಮಾರಾಟಕ್ಕೂ ವ್ಯವಸ್ಥೆ ಮಾಡಿದ್ದಾರೆ. 'ಗ್ರೀನ್ ವೇವ್' ಬಳಗದ ಕುರಿತ ಹೆಚ್ಚಿನ ಮಾಹಿತಿಗೆ **greenwaveindia.com** ಕ್ಲಿಕ್ಕಿಸಬಹುದು.

ಪ್ರತಿಕ್ರಿಯಿಸಿ: **feedback@sudha.co.in**


## ನಿತ್ಯದ ಆಹಾರದ ಜೊತೆಗೆ ತುಪ್ಪ ಸೇವನೆಯಿಂದ ದೊರೆಯುವ ಪ್ರಯೋಜನಗಳು

# ತುಪ್ಪ – ನೈಸರ್ಗಿಕ ಆರೋಗ್ಯ ವರ್ಧಕ

**ಒಂದು ಬಾರಿ ಚರ್ಚೆಯ ಮಧ್ಯೆ, ಡಾಕ್ಟರ್ ಪಿ.ಕೆ.ವಾರಿಯರ್ "ಹಾಲು ಮತ್ತು ತುಪ್ಪದ ನಡುವಿನ ವ್ಯತ್ಯಾಸ ಏನು?" ಎಂದು ಪ್ರಶ್ನಿಸಿದರು.**

ಜೊತೆಗೆ ಅವರೇ ತಮ್ಮ ಪ್ರಶ್ನೆಗೆ ಉತ್ತರಿಸಿದರು:

"ಬೆಂಕಿಯ ಮೇಲೆ ಹಾಲು ಸುರಿದಾಗ ಏನಾಗುತ್ತದೆ? ಬೆಂಕಿ ನಂದಿ ಹೋಗುತ್ತದೆ. ಆದರೆ ತುಪ್ಪ ಸುರಿದಾಗ ಬೆಂಕಿ ಇನ್ನಷ್ಟು ಉರಿಯತೊಡಗುತ್ತದೆ."

ಇದರ ಅರ್ಥ, ತುಪ್ಪ ಬೆಂಕಿಯನ್ನು ಹೊತ್ತಿ ಉರಿಸಬಲ್ಲದು.

ಇಲ್ಲಿ ಬೆಂಕಿ ಎಂದರೆ, ಕೇವಲ ಆಹಾರ ಬೇಯಿಸುವ ಒಂದು ಶಕ್ತಿಯೇ? ಅಲ್ಲ, ಇದರ ಅರ್ಥ ಕೇವಲ ಶಕ್ತಿಯಲ್ಲ, ಇದು ಮನುಷ್ಯ ದೇಹದಲ್ಲಿ ಉಂಟಾಗುವ ಚಯಾಪಚಯ ಕ್ರಿಯೆಯ ಉತ್ತುಂಗದ ಘಟ್ಟ. ಮನುಷ್ಯನ ದೇಹದಲ್ಲಿ ಹಾಲಿನ ಅಂಶಗಳಿಂದಾಗಿ ಲಭಿಸುವ ಫಲಿತಾಂಶಗಳು ತ್ವರಿತವಾಗಿ ಗೋಚರಿಸುತ್ತವೆ. ಅದೇ, ತುಪ್ಪದ ಫಲಿತಾಂಶಗಳು ನಿಧಾನವಾಗಿ ಕಂಡುಬರುತ್ತವಾದರೂ, ದೇಹದಲ್ಲಿ ದೀರ್ಘಕಾಲ ಉಳಿಯುತ್ತವೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ದೇಹದ ಆರೈಕೆ ವಿಚಾರದಲ್ಲಿ ಹಾಲಿಗಿಂತ ತುಪ್ಪ ಮಹತ್ವದ್ದಾಗಿದೆ.

ಅಗತ್ಯ ಪ್ರಮಾಣದ ತುಪ್ಪ ಸೇವಿಸಿದಾಗ ಮಾತ್ರ ಸಂಪೂರ್ಣ ಬುದ್ಧಿಮತ್ತೆ ಹಾಗೂ ನೆನಪಿನ ಶಕ್ತಿ ಲಭಿಸುತ್ತದೆ. ಹೀಗಾಗಿ, ನಿಮ್ಮ ಪೌಷ್ಟಿಕಾಂಶಭರಿತ ಆಹಾರ ಪದಾರ್ಥಗಳ ಪಟ್ಟಿಯಲ್ಲಿ ತುಪ್ಪವು ಕೂಡ ಒಂದು ಅವಶ್ಯಕ ಪದಾರ್ಥ ಆಗಿರಬೇಕು. ಅಲ್‌ಝೈಮರ್‌ನಂತಹ ಕಾಯಿಲೆ, ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ದೃಷ್ಟಿಹೀನತಾ ಸಮಸ್ಯೆಗಳನ್ನು ತಡೆಗಟ್ಟಲು, ಶ್ರವಣ ಮತ್ತು ದೃಷ್ಟಿ ಸಾಮರ್ಥ್ಯವನ್ನು ಹೆಚ್ಚಿಸಲು ತುಪ್ಪ ಸಹಕಾರಿಯಾಗಿದೆ.



ತುಪ್ಪವನ್ನು ಒಂದು ಆಹಾರ ಪದಾರ್ಥ ಎಂದು ಪರಿಗಣಿಸಲಾಗಿದೆ, ಅಂತೆಯೇ ಇದನ್ನು ಮಧುರವಾದ ಧ್ವನಿಗೆ ಅತ್ಯುತ್ತಮ ಔಷಧಿ ಎಂದೂ ಮತ್ತು ಮಾನವ ದೇಹದ ಒಳಿತಿಗೆ ಒಂದು ವರದಾನವೆಂದು ಕೂಡ ಪರಿಗಣಿಸಲಾಗಿದೆ. ಅಲ್ಲದೆ, ತುಪ್ಪವನ್ನು "ಯೋನಿ ಸ್ವಾಸ್ಥ್ಯ" ಆರೈಕೆಗೆ ಕೂಡ ಅತ್ಯುತ್ತಮ ಔಷಧಿ ಎನ್ನಲಾಗುತ್ತದೆ.

ಹಿಂದಿನ ದಿನಗಳಲ್ಲಿ ಅಪಸ್ಮಾರ ಖಾಯಿಲೆಗೆ (ಮೂರ್ಛೆ ರೋಗ) ಚಿಕಿತ್ಸೆ ನೀಡಲು ತುಪ್ಪವನ್ನು ಹೊಂದಿರುವ ಔಷಧಿಗಳನ್ನು ಉಪಯೋಗಿಸುತ್ತಿದ್ದರು. ಹಲವು ವರ್ಷಗಳ ಹಿಂದೆಯಷ್ಟೆ ಗಾಯಗಳನ್ನು ಶುಚಿಗೊಳಿಸುವ ಮತ್ತು ಪರಿಣಾಮಕಾರಿಯಾಗಿ ಶಮನಗೊಳಿಸುವ ಸಾಮರ್ಥ್ಯವು ತುಪ್ಪದಲ್ಲಿದೆ ಎಂಬುದು ಕೂಡ ತಿಳಿದುಬಂದಿದೆ. ಜೇನಿನೊಂದಿಗೆ ಬೆರೆಸಿಯಾಗಲಿ ಅಥವಾ ನೇರವಾಗಿಯಾಗಲಿ ತುಪ್ಪವನ್ನು ಸವರಿ ಗಾಯಗಳನ್ನು ವೇಗವಾಗಿ ಗುಣಪಡಿಸಬಹುದಾಗಿದೆ.

**ವಿವರಗಳಿಗೆ ಸಂಪರ್ಕಿಸಿ: ಆರ್ಯವೈದ್ಯ ಶಾಲಾ ಕೊಟ್ಟಕ್ಕಲ್, ಜಯನಗರ, 2ನೇ ಬ್ಲಾಕ್, ಬೆಂಗಳೂರು. ಫೋ: 080–26572956**